ಇವರ ಆಳ್ವಿಕೆ ಕಾಲದ ತೂಕದ ಬಟ್ಟುಗಳು ಸಹ ಇವರ ಸಂಗ್ರಹದಲ್ಲಿದ್ದು, 'ತೊಲ'ದ ಲೆಕ್ಕದಲ್ಲಿ ತೂಕದ ಕಲ್ಲುಗಳು ಅಲ್ಲಿ ಬಳಕೆಯಲ್ಲಿದ್ದವು.

### ಅಪೂರ್ವ ತುಲಾ ಭವನ

ಅನನ್ಯ, ಅಪೂರ್ವ ಸಂಗ್ರಹಗಳನ್ನು ಹೊಂದಿರುವ ವಸ್ತುಸಂಗ್ರಹಾಲಯ 'ತುಲಾ ಭವನ' ಇತಿಹಾಸದ ಮಾಹಿತಿ ಕಣಜದಂತಿದೆ. ತೂಕ ಮತ್ತು ಅಳತೆಯ ಜಗತ್ತನ್ನೇ ಅನಾವರಣಗೊಳಿಸುವ, 14ನೇ ಶತಮಾನದಿಂದ ಹಿಡಿದು ಇಂದಿನವರೆಗೂ ತೂಕ ಮತ್ತು ಅಳತೆಯಲ್ಲಾದ ಪರಿವರ್ತನೆಯನ್ನು ಮನಕ್ಕೆ ಇಳಿಸುವ, ದೇಶದಲ್ಲೇ ಅಪರೂಪದ್ದು ಎಂದು ಸಾರಿ ಹೇಳುವ ವಸ್ತುಸಂಗ್ರಹಾಲಯವಿದು.


ದಾವಣಗೆರೆ ನಗರದ ವಾಣಿಜ್ಯ ಚಟುವಟಿಕೆಗಳ ನೆಲೆ ಚಾಮರಾಜಪೇಟೆಯಲ್ಲಿರುವ 'ಶಂಕರ ಎಂಟರ್‌ಪ್ರೈಸಸ್' ಅಂಗಡಿ ಮಾಲೀಕ ಬಸವರಾಜ ಯಳಮಲ್ಲಿ ಈ ಸಂಗ್ರಹಾಲಯದ ರೂವಾರಿ. ತಂದೆ ಚನ್ನವೀರಪ್ಪ ಯಳಮಲ್ಲಿ ಅವರಿಂದ ಬಳುವಳಿಯಾಗಿ ಬಂದ ತೂಕ ಮತ್ತು ಅಳತೆ ಸಾಧನಗಳ ವ್ಯಾಪಾರವನ್ನು ತಿರಸ್ಕರಿಸದೆ ವೃತ್ತಿಯನ್ನೇ ಹವ್ಯಾಸವಾಗಿಸಿಕೊಂಡು, ಎರಡನ್ನೂ ಸರಿದೂಗಿಸುತ್ತ ದೊಡ್ಡದೊಂದು ವಸ್ತುಸಂಗ್ರಹಾಲಯವನ್ನೇ ರೂಪಿಸಿದ್ದಾರೆ. ದೇಶದ ವಿವಿಧೆಡೆ ಬಳಸುತ್ತಿದ್ದ ತೂಕದ ಬಟ್ಟುಗಳು, ಮಾಪನಗಳು, ತಕ್ಕಡಿಗಳು, ಗೇಜ್‌ಗಳು ಇವರ ಸಂಗ್ರಹದಲ್ಲಿವೆ. ಇವರ 20 ವರ್ಷಗಳ ನಿರಂತರ 'ಸಂಗ್ರಹ'ದ ಬದ್ಧತೆಯಿಂದಾಗಿ ಇಂದು 5000ಕ್ಕೂ ಹೆಚ್ಚು ತೂಕ ಮತ್ತು ಅಳತೆಯ ಸಾಧನಗಳು ಇತಿಹಾಸದ ಕಥನಗಳನ್ನು ಸಾರುತ್ತಿವೆ. ಅಂದು ರಾಜರು, ವ್ಯಾಪಾರಿಗಳು, ನಾಟಿ ವೈದ್ಯರು, ಜನಸಾಮಾನ್ಯರ ಕೈಯಲ್ಲಿ ನಲಿದಾಡಿದ ತೂಕ, ಅಳತೆಯ ಸಾಧನಗಳು ಸಾವಿರಾರು ಕಥೆಗಳನ್ನು ಅಡಗಿಸಿಕೊಂಡು ಸದ್ದಿಲ್ಲದೆ ಕುಳಿತಿವೆ. ಕೆಲವು ವಾರ್ನಿಶ್ ಪೂಸಿಕೊಂಡು ಹೊಳೆಯುತ್ತಿದ್ದರೆ, ಇನ್ನು ಕೆಲವು ಮೈಬಣ್ಣ ಮಾಸಿಕೊಂಡು ಗತಕಾಲದ ವೈಭವವನ್ನು ಸಾರುತ್ತಿವೆ.

ತಮ್ಮ ಇತಿಹಾಸದ ಜ್ಞಾನ ಮತ್ತು ವೃತ್ತಿ ಬದುಕಿನ ಅನುಭವಗಳನ್ನು ಧಾರೆ ಎರೆದು ಸಂಗ್ರಹಾಲಯಕ್ಕೆ ಜನ್ಮ ನೀಡಿರುವ ಬಸವರಾಜ್ ಅವರು ಓದಿರುವುದು 10ನೇ ತರಗತಿವರೆಗೆ ಮಾತ್ರ. ಆದರೆ, ಸಾಧನಗಳ ಅಧಿಕೃತ ಮಾಹಿತಿ ಕಲೆಹಾಕಲು ಅವರು ಅಧ್ಯಯನ ನಡೆಸಿರುವುದು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಪುಸ್ತಕಗಳನ್ನು. ತೂಕ ಮತ್ತು ಅಳತೆಯ ಸಾಧನಗಳ ದೃಢೀಕರಣಕ್ಕೆ ಪರಿಶೀಲನೆಗೆ ಅವರು ಅವಲಂಬಿಸಿದ್ದು ಇತಿಹಾಸಕ್ಕೆ ಸಂಬಂಧಿಸಿದ ಗೆಜೆಟಿಯರ್‌ಗಳು, ಇಂಗ್ಲಿಷ್ ಪುಸ್ತಕಗಳನ್ನು. ಇಂಗ್ಲಿಷ್ ಆವೃತ್ತಿಯಲ್ಲಿ ಪ್ರಕಟಗೊಂಡ ದೇಶದ ಹಲವು ಗೆಜೆಟಿಯರ್‌ಗಳು ಇವರ ಸಂಗ್ರಹದಲ್ಲಿವೆ.

2015ರಲ್ಲಿ ದಾವಣಗೆರೆಯ ಚಾಮರಾಜಪೇಟೆಯಲ್ಲಿರುವ ತಮ್ಮ ಅಂಗಡಿಯ ಮೇಲ್ಮಹಡಿಯಲ್ಲೇ ವಸ್ತುಸಂಗ್ರಹಾಲಯವನ್ನು ಉದ್ಘಾಟಿಸಿ ಸಾರ್ವಜನಿಕ ವೀಕ್ಷಣೆಗೆ ಮುಕ್ತಗೊಳಿಸಿದರು. 'ಇಷ್ಟೊಂದು ಬಗೆಯ, ವೈವಿಧ್ಯಮಯ ತೂಕ–ಅಳತೆಯ ಸಾಧನಗಳು ಒಂದೇ ಸೂರಿನಲ್ಲಿ ಇರುವುದು ದೇಶದಲ್ಲಿ ಇಲ್ಲಿ ಮಾತ್ರವೇ' ಎಂದು ಸಂಗ್ರಹಾಲಯವನ್ನು ವೀಕ್ಷಿಸಿದ ಹಲವು ಇತಿಹಾಸಕಾರರು ಮೆಚ್ಚುಗೆಯ ಅಚ್ಚೊತ್ತಿದ್ದಾರೆ. ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಸ್ಥಾನ ಗಿಟ್ಟಿಸಿಕೊಂಡಿರುವ 'ತುಲಾ ಭವನ'ಕ್ಕೆ ಅಂಚೆ ಇಲಾಖೆಯೂ 2017ರ ಜನವರಿ 21ರಂದು ಭವನದ ವಿಶೇಷ ಲಕೋಟೆಯನ್ನು ಬಿಡುಗಡೆಗೊಳಿಸಿ ಗೌರವ ನೀಡಿದೆ.

### ಹೀಗೆ ಉಂಟಾಯಿತು ಸಂಗ್ರಹದ ನಂಟು

ತಂದೆಯ ವ್ಯಾಪಾರಕ್ಕೆ ಬಸವರಾಜ್ ಅವರು 1982ರಲ್ಲಿ ಕೈಜೋಡಿಸಿದರು. ವ್ಯಾಪಾರದ ಜತೆಗೆ ಬಿಡುವಿನ ವೇಳೆಯಲ್ಲಿ ಅಂಚೆಚೀಟಿ, ನಾಣ್ಯ ಸಂಗ್ರಹದ ನಂಟನ್ನೂ ಬೆಳೆಸಿಕೊಂಡಿದ್ದರು. 2008ರಲ್ಲಿ ಮಹಾತ್ಮ ಗಾಂಧಿ ಅವರ ಅಂಚೆಚೀಟಿ ಪ್ರದರ್ಶನಕ್ಕೆ ರಾಷ್ಟ್ರಮಟ್ಟದಲ್ಲಿ ಕಂಚಿನ ಪದಕವನ್ನೂ ಗಳಿಸಿದ್ದರು. ಸದಾ ಕ್ರಿಯಾಶೀಲ ಮನಸ್ಸಿನ ಬಸವರಾಜ್ ಅವರಿಗೆ ಹೊಸದನ್ನು ಮಾಡುವ ತುಡಿತ ಬಹುವಾಗಿ




ವಿಜಯನಗರ ಸಾಮ್ರಾಜ್ಯದ 'ಗದ್ಯಾಣ'ಗಳು

## ಸಂಗ್ರಹಾಲಯದಲ್ಲಿವೆ ಇವೆಲ್ಲ...

14ನೇ ಶತಮಾನದಿಂದ ಈಚಿನವರೆಗೆ ಬಳಕೆಯಲ್ಲಿದ್ದು, ತೆರೆಮರೆಗೆ ಸರಿದ ತೂಕ ಮತ್ತು ಅಳತೆಯ ಸಾಧನಗಳೆಲ್ಲವೂ ಸಂಗ್ರಹಾಲಯವನ್ನು ಅಲಂಕರಿಸಿವೆ. ಕರುನಾಡನ್ನು ಆಳಿದ ರಾಜ ಮನೆತನಗಳಷ್ಟೇ ಅಲ್ಲ; ದೇಶದ ವಿವಿಧ ರಾಜಮನೆತನಗಳ ಕಾಲದಲ್ಲಿ ಬಳಸುತ್ತಿದ್ದ ಸಾಧನಗಳು, ಇಂಗ್ಲೆಂಡ್, ಜರ್ಮನಿ, ಅಮೆರಿಕ, ಫ್ರಾನ್ಸ್‌ನಲ್ಲಿ ತಯಾರಾಗಿ ಭಾರತದಲ್ಲಿ ಬಳಸುತ್ತಿದ್ದ ವಿವಿಧ ತೂಕದ ಯಂತ್ರಗಳು ಇಲ್ಲಿವೆ.

ಶತಮಾನದಷ್ಟು ಹಳೆಯದಾದ, 1923ರಲ್ಲಿ ಕೋಲ್ಕತ್ತದ ಡಬ್ಲ್ಯು.ಬಿ. ಲೌಸನ್ (W.B.Lowson) ಕಂಪನಿ ತಯಾರಿಸಿದ ಘಂಟೆ ಆಕಾರದ ಹಿತ್ತಾಳೆಯ ಮಿಶ್ರಲೋಹದ ಸಾವಿರ ತೊಲಗಳನ್ನು ತೂಗುವ ಬಟ್ಟು (ಕಲ್ಲು) ಗಮನಸೆಳೆಯುತ್ತದೆ. ತಾಮ್ರ ಮತ್ತು ಹಿತ್ತಾಳೆಯ ನೆಲ್ಲಿಕಾಯಿ ಆಕೃತಿಯ ಬಟ್ಟುಗಳು ಸೂಜಿಗಲ್ಲಿನಂತೆ ಸೆಳೆಯುತ್ತವೆ. ವಿಜಯನಗರ, ಬೀದರ್, ಕಲಬುರಗಿ, ರಾಯಚೂರು ಸೇರಿ ವಿವಿಧ ಪ್ರದೇಶಗಳಲ್ಲಿ ಇವುಗಳನ್ನು ಸಂಗ್ರಹಿಸಿದ್ದಾರೆ. ಮಲೆನಾಡು ಭಾಗದಲ್ಲಿ ಬಳಸುತ್ತಿದ್ದ ಅಷ್ಟಕೋನ ಆಕೃತಿಯ ಹಿತ್ತಾಳೆ ಬಟ್ಟುಗಳು, ಮೈಸೂರು ಒಡೆಯರ ಕಾಲದಲ್ಲಿ ಬಳಸುತ್ತಿದ್ದ ಹಿತ್ತಾಳೆ ಮಾಪುಗಳು, ಬೆಳ್ಳಿ, ಬಂಗಾರ, ಔಷಧಿಯಂತಹ ಮೌಲ್ಯದ ವಸ್ತುಗಳನ್ನು ತೂಗುವ ತಕ್ಕಡಿಯ ಡಬ್ಬಿ ಗಮನಸೆಳೆಯುತ್ತವೆ.

ವಿವಿಧ ಸಂಸ್ಥಾನಗಳಲ್ಲಿ ಬಳಕೆಯಲ್ಲಿದ್ದ ಕಬ್ಬಿಣ ಮತ್ತು ಹಿತ್ತಾಳೆಯ ಬೀಮ್ ಸ್ಕೇಲ್‌ಗಳು (ಕೈಯಲ್ಲಿ ಹಿಡಿದು ತೂಗುವುದು), ಎಣ್ಣೆ ಅಳೆಯಲು ಬಳಸುತ್ತಿದ್ದ ಮಾಪುಗಳು, ಕರಾವಳಿ ಪ್ರದೇಶದಲ್ಲಿ ಬಳಕೆಯಲ್ಲಿದ್ದ ಕುಡಿತೆಗಳು, ಒಣ ಮೀನುಗಳನ್ನು ಅಳೆಯಲು ಬಳಸುತ್ತಿದ್ದ ಬಿದಿರಿನ ಪಾವುಗಳು, ವಿವಿಧ ಕಾಲಮಾನಗಳಲ್ಲಿ ಅಂಚೆ ಕಚೇರಿಯಲ್ಲಿ ಬಳಸುತ್ತಿದ್ದ ತಕ್ಕಡಿಗಳು ಇಲ್ಲಿ ಸ್ಥಾನ ಪಡೆದಿವೆ.

ಮಿಲಿ ಗ್ರಾಂನಿಂದ ಹಿಡಿದು ವಾಹನಗಳನ್ನು ತೂಗಲು ಬಳಸುತ್ತಿದ್ದ 10000 ಕೆ.ಜಿ. ತೂಗುವ ಗೇಜ್‌ಗಳು ಸಂಗ್ರಹಾಲಯದಲ್ಲಿರುವುದು ವಿಶೇಷ. ಜಪಾನ್ ದೇಶದ ವೈರ್ ಗೇಜ್, ಒಂಟೆ ಚರ್ಮದಿಂದ ಮಾಡಿದ ದಂಡಿಗೆ ಹೀಗೆ ಗತಕಾಲವನ್ನು ಮೆಲುಕು ಹಾಕುವ ವಸ್ತುಗಳು ಇವರ ಸಂಗ್ರಹದಲ್ಲಿವೆ. 90 ವರ್ಷಗಳಷ್ಟು ಹಿಂದಿನ ಪೆಂಡ್ಯುಲಂ ಗಡಿಯಾರಗಳೂ ಇಲ್ಲಿ ಟಿಕ್ ಟಿಕ್ ಸದ್ದು ಮಾಡುತ್ತ ಜೀವಂತವಾಗಿವೆ. ಇವಲ್ಲದೇ 80–90 ವರ್ಷ ಹಿಂದಿನ ವಿದ್ಯುತ್ ಮೀಟರ್‌ಗಳು, ಇಂಗ್ಲೆಂಡ್, ಜರ್ಮನಿ ಸೇರಿ ದೇಶೀಯವಾಗಿ ತಯಾರಾದ ವಿವಿಧ ಬಗೆಯ ವಿದ್ಯುತ್ ಮೀಟರ್‌ಗಳು ಇಲ್ಲಿವೆ. 250 ವರ್ಷಗಳಷ್ಟು ಹಳೆಯದಾದ ದೊಡ್ಡ ಸರಪಳಿಗಳೂ ಸಂಗ್ರಹಾಲಯದ ತೂಕ ಹೆಚ್ಚಿಸಿವೆ.